Witness present and duly sworn on 24-06-2025.

Chief Examination by : Sri.KMR, counsel for Plaintiff :

I have filed my affidavit in lieu of my examination in chief. The contents of my affidavit are true and correct. I have signed after knowing the contents of the affidavit.

Cross Examination by : Sri.SBG, and Sri.BMS counsel for Defendants:

Call it later.

(Typed to my dictation in the open court)

R.O.I. & A.C.

Civil Judge & JMFC.,
Witness sign Pandavapura.

ದಿನಾಂಕ: **24-06-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ-**1** ಪರ ವಕೀಲರಾದ ಶ್ರೀ ಎಸ್.ಬಿ.ಜಿ.ರವರಿಂದ :

ಪ್ರತಿವಾದಿ-1 ಮತ್ತು ಅವರ ಪರ ವಕೀಲರು ಗೈರು ಹಾಜರು. ಆ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು: ಪ್ರತಿವಾದಿ-**2** ಪರ ವಕೀಲರಾದ ಶ್ರೀ ಬಿ.ಎಂ.ಎಸ್.ರವರಿಂದ :

**1.** ವಾದಿ ಮತ್ತ ನಾನು ಅಣ್ಣತಮ್ಮಂದಿರು. ದಾವಾ ಸ್ವತ್ತಿನ ಸರ್ವೆ ನಂ: 268. ದಾವಾ ಸ್ವತ್ತು ವಾದಿಯ ಮುತ್ತಾತನ ಸ್ವತ್ತು. 1972 ರಲ್ಲಿ ಅವರಿಗೆ ಸ್ವತ್ತು ಬಂದಿದೆ. ಸಣ್ಣೇಗೌಡರಿಗೆ

1972 ರಲ್ಲಿ ದತ್ತು ಆಸ್ತಿ ಎಂದು ನನಗೆ ಗೊತ್ತು. ಗೆಂಡಯ್ಯ ಎಂಬುವವರಿಂದ ಸಣ್ಣೇಗೌಡರಿಗೆ ಆಸ್ತಿ ಬಂದಿದೆ. ಸರ್ವೆ ನಂಃ268 ರಲ್ಲಿ 24 ಗುಂಟೆ ಬಂದಿರುವುದು ಗೊತ್ತು. ಸಣ್ಣೇಗೌಡರನ್ನು ದತ್ತು ಸ್ವೀಕಾರ ಮಾಡಿರುವ ದಾಖಲೆಯನ್ನು ನೋಡಿದ್ದೇನೆ. ಸದರಿ ದಾಖಲೆಯಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿದೆ. ಸರ್ವೆ ನಂಃ268/1 ರ ದಕ್ಷಿಣ ದಿಕ್ಕಿಗೆ ನನ್ನ ಸ್ವತ್ತು 5 ಗುಂಟೆ ಇದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ಈಗ ಹೇಳಿದ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿದ್ದೇನೆ, ನಮ್ಮ ವಕೀಲರು ಬರೆಸಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ಭಾಗದಲ್ಲಿ ನನಗೆ ಸೇರಿದ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2**. ದಾವಾ ಸ್ವತ್ತಿನ ಪೂರ್ವಕ್ಕೆ ಜ್ಯೋತಿ ಎಂಬುವವರ ಜಮೀನು ಇದೆ. ದಾವಾ ಸ್ವತ್ತಿನ ಪೂರ್ವಕ್ಕೆ ಕೋಟೆ ತಿಮ್ಮೇಗೌಡರ ಜಮೀನು ಇದೆ ಎಂದರೆ ಸರಿ. ಕೋಟೆ ತಿಮ್ಮೇಗೌಡರ ಜಮೀನಿನ ಪೂರ್ವಕ್ಕೆ ಜ್ಯೋತಿರವರ ಜಮೀನು ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಎಂದಿಗೂ ವಾದಿಯು ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿರದಿದ್ದರು, ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದ ಪಹಣಿ ನೋಡಿದ್ದೇನೆ. ಉಳಿದ ದಾಖಲೆಗಳನ್ನು ನಾನು ನೋಡಿಲ್ಲ. 2025 ನೇ ಸಾಲಿನ ಪಹಣಿಯನ್ನು ನೋಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ದಾಖಲೆಗಳನ್ನು ನಾನು ನೋಡಿಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**